ಎನ್. ಜಗನ್ನಾಥ ಪ್ರಕಾಶ್

# ಪ್ರಯೋಗಶೀಲ ನಾಟಕಕಾರ
# ಎ.ಎನ್. ಶೇಷಾಚಾರ್

ಮಹಿಳಾ ಪಾತ್ರಗಳಿಂದ ಆಕರ್ಷಿತರಾಗಿ ಬಣ್ಣದ ಜಗತ್ತಿಗೆ ಕಾಲಿಟ್ಟು 'ದುರ್ಯೋಧನ'ನ ಪಾತ್ರದಿಂದ ಕನ್ನಡ ವೃತ್ತಿ ರಂಗಭೂಮಿಯಲ್ಲಿ ತಮ್ಮದೇ ಛಾಪು ಮೂಡಿಸಿದ ಕಲಾವಿದ ಎ.ಎನ್. ಶೇಷಾಚಾರ್.

ಶಾಲಾ ದಿನಗಳಲ್ಲಿ ನಾಟಕಗಳಲ್ಲಿ ಪಾತ್ರ ನಿರ್ವಹಿಸುತ್ತಿದ್ದರೂ ಓದಿನಲ್ಲಿ ಮುಂದಿದ್ದ ಶೇಷಾಚಾರ್ ಪದವಿ ಪಡೆಯಲು ಮೈಸೂರಿನ ಮಹಾರಾಜ ಕಾಲೇಜಿಗೆ ಸೇರಿದರೂ ಹೆಚ್ಚಿನ ಗಮನಕೊಟ್ಟಿದ್ದು ರಂಗಭೂಮಿ ಕಡೆಗೆ. ಎತ್ತರವಾದ ದೇಹ, ಗತ್ತಿನ ನಡವಳಿಕೆ, ಕಂಚಿನ ಧ್ವನಿಯನ್ನು ಹೊಂದಿದ್ದ ಶೇಷಾಚಾರ್ ಒಳ್ಳೆಯ ಶಿಕ್ಷಣ ಪಡೆದು ನೌಕರಿ ಹಿಡಿಯಬೇಕೆಂಬುದು ಮನೆಯವರ ಆಶೆ. ಆದರೆ, ಮೈಸೂರಿನ ಸಾಂಸ್ಕೃತಿಕ ಪರಿಸರ ಅವರನ್ನು ಸೆಳೆದಿದ್ದು ನಾಟಕ ಕ್ಷೇತ್ರದತ್ತ. ಶೇಷಾಚಾರ್ ಮೊದಲಿಗೆ ಅವಕಾಶ ಕೇಳಿದ್ದು ಎಂ.ವಿ. ಸುಬ್ಬಯ್ಯ ನಾಯ್ಡು ಹಾಗೂ ಆರ್. ನಾಗೇಂದ್ರರಾಯರ 'ಶ್ರೀ ಸಾಹಿತ್ಯ ಸಾಮ್ರಾಜ್ಯ ನಾಟಕ ಮಂಡಲಿ'ಯಲ್ಲಿ.

ಅವರು ಆರಂಭದಲ್ಲಿ ಅಭಿನಯಿಸಿದ್ದು 'ಭೂ ಕೈಲಾಸ' ನಾಟಕದಲ್ಲಿ. ಅಲ್ಲಿ ನಿರ್ವಹಿಸಿದ ಪಾತ್ರ ಈಶ್ವರನದು. ಪ್ರಥಮ ಪ್ರಯತ್ನದಲ್ಲೇ ಪ್ರೇಕ್ಷಕರ ಪ್ರಶಂಸೆಗೆ ಪಾತ್ರರಾದ ಶೇಷಾಚಾರ್ ನಂತರ ನಿರ್ವಹಿಸಿದ್ದು 'ರಾಜಸಿಂಹ' ನಾಟಕದಲ್ಲಿ ಮಂತ್ರಿ ಪಾತ್ರ ಹಾಗೂ 'ರಾಜಭಕ್ತಿ' ನಾಟಕದಲ್ಲಿ ಕಂದನ ಪಾತ್ರವನ್ನು. ಸ್ವಪ್ರಯತ್ನದಿಂದ ರಂಗಭೂಮಿಯ ಪಾಠಗಳನ್ನು ಕಲಿತಿದ್ದ ಅವರು ಪೌರಾಣಿಕ, ಚಾರಿತ್ರಿಕ ನಾಟಕಗಳಲ್ಲಿ ನಟಿಸುತ್ತಿದ್ದರು. ಅವುಗಳಲ್ಲಿ ಅವರಿಗೆ ಹೆಸರು ತಂದು ಕೊಟ್ಟಿದ್ದು ದುರ್ಯೋಧನನ ಪಾತ್ರ.

ಮಳವಳ್ಳಿ ಸುಂದರಮ್ಮ ಮುಂದಾಳತ್ವ ವಹಿಸಿದ್ದ 'ಶ್ರೀ ಚಾಮುಂಡೇಶ್ವರಿ ನಾಟಕ ಸಭಾ' ಪ್ರವೇಶಿಸಿದ ಶೇಷಾಚಾರ್ 'ರಾಜಸೂಯಯಾಗ', 'ದಾನಶೂರ ಕರ್ಣ', 'ಭೀಷ್ಮ ಪ್ರತಿಜ್ಞೆ' ನಾಟಕಗಳಲ್ಲಿ 'ದುರ್ಯೋಧನ'ನ ಪಾತ್ರವನ್ನು ನಿರ್ವಹಿಸಿದರು. ಆಕರ್ಷಕ ಮೈಕಟ್ಟಿನ ಈ ನಟನ ಧೀರ ನಡಿಗೆ, ಸುಲಲಿತ ಸಂಭಾಷಣಾ ಶೈಲಿ, ಅನಾಯಾಸವಾದ ಅಭಿನಯ ನೋಡುಗರನ್ನು ಹುಚ್ಚೆಬ್ಬಿಸಿತು. ಕನ್ನಡ ರಂಗಭೂಮಿ ಇತಿಹಾಸದಲ್ಲಿ 'ದುರ್ಯೋಧನ' ಪಾತ್ರ ದಾಖಲಿಸಿದ ಶೇಷಾಚಾರ್ ಯಾವುದೇ ಪಾತ್ರಕ್ಕಾದರೂ ನ್ಯಾಯ ಒದಗಿಸುವಂತಹ ನಟರೆನ್ನಿಸಿಕೊಂಡರು.

'ಚಂದ್ರಕಲಾ ನಾಟಕ ಮಂಡಲಿ'ಯಲ್ಲಿ 'ಸಂಸಾರ ನೌಕ', 'ಪ್ರೇಮಲೀಲಾ', 'ಕೀಚಕ' ನಾಟಕಗಳಲ್ಲಿ ಪ್ರಮುಖ ಪಾತ್ರ ವಹಿಸುತ್ತಿದ್ದ ಶೇಷಾಚಾರ್ 'ಭಾರತ ಮಾತೃ ಕರ್ನಾಟಕ ನಾಟಕ ಸಭಾ' ಸಂಸ್ಥೆಗೆ ಕಾಲಿಟ್ಟು ಅಲ್ಲಿ ಶುಕ್ರಾಚಾರಿ ಮತ್ತು ದುರ್ಯೋಧನ ಪಾತ್ರಗಳನ್ನು ನಿರ್ವಹಿಸಿದರು.